5364(6031) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಟಗಿ–ಸಾಲವಾಡ ಏತ ನೀರಾವರಿ ಯೋಜನೆ ಯಾವಾಗ ಮಂಜೂರಾಯಿತು?

ಆ) ಈ ಯೋಜನೆಯಿಂಡ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು;

ಇ) ಯೋಜನೆಯ ಅಂದಾಜು ಮೊತ್ತವೆಷ್ಟು;

ಈ) ಸದರಿ ಯೋಜನೆಗೆ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನವೆಷ್ಟು;

ಉ) ಯೋಜನೆಗೆ ಇಲ್ಲಿಯವರೆಗೆ ಎಷ್ಟು ಹಣ ವಿನಿಯೋಗಿಸಲಾಗಿದೆ; (ವಿವರ ಒದಗಿಸುವುದು);

ಊ) ಸದರಿ ಕಾಮಗಾರಿ ಕೆಲಸ ಯಾವ ಹಂತದಲ್ಲಿದೆ.

ಋ) ಯೋಜನೆ ಪೂರ್ಣಗೊಳ್ಳಲು ನಿಗದಿಪಡಿಸಿದ ಕಾಲಾವಧಿ ಎಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಟಗಿ–ಸಾಸಲವಾಡ ಏತ ನೀರಾವರಿ ಯೋಜನೆಗೆ ಸರ್ಕಾರ ದಿನಾಂಕ 21–09–1992ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) 1984 ಹೆಕ್ಟೇರ್. (4900 ಎಕರೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

ಇ) ರೂ. 800 ಲಕ್ಷಗಳು.

ಈ) ರೂ. 100.00 ಲಕ್ಷಗಳು.

ಉ) ಇಲ್ಲಿಯವರೆಗೆ ರೂ. 94.56 ಲಕ್ಷ ಹಣ ವಿನಿಯೋಗಿಸಲಾಗಿದೆ. ವರ್ಷವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಊ) ಈ ಯೋಜನೆಯ ವಿದ್ಯುತ್, ಮೆಕ್ಯಾನಿಕಲ್, ಜಾಕ್‌ವೆಲ್ ಹಾಗೂ ತತ್ಸಂಬಂಧಿತ ಕಾಮಗಾರಿಗಳು ಪ್ರಗತಿಯಲ್ಲಿವೆ. 10.907 ಕಿ.ಮೀ. ಉದ್ದದ ಎಡದಂಡೆ ನಾಲೆ ಹಾಗೂ ಬಲದಂಡೆಯ ನಾಲೆಯ ಮೊದಲು 9.00 ಕಿ.ಮೀನ ಕಾಮಗಾರಿಗಳು ಪ್ರಗತಿಯಲ್ಲಿವೆ. ಬಲದಂಡೆ ನಾಲೆಯ ಉಳಿದ 9 ಕಿ.ಮೀ ನಿಂದ 27.80 ಕಿ.ಮೀಗಳ ಕಾಮಗಾರಿಗಳನ್ನು ಪ್ರಾರಂಭಿಸಬೇಕಿದೆ.

ಋ) ಸೆಪ್ಟಂಬರ್ 2006 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಅನುಬಂಧ

ಕ್ರ.ಸಂ	ಆರ್ಥಿಕ ವರ್ಷ	ವಿನಿಯೋಗಿಸಲಾದ ಹಣ ರೂ. ಲಕ್ಷಗಳಲ್ಲಿ
1	1992–93	0.32
2	1993–94	1.16
3	1994–95	–
4	1995–96	2.23
5	1996–97	21.79
6	1997–98	12.16
7	1998–99	1.91
8	1999–00	14.08

1	2	3
9	2000–01	7.15
10	2001–02	9.00
11	2002–03	2.46
12	2003–04	–
13	2004–05	17.35
14	2005–06	4.95
	ಒಟ್ಟು	94.56

5366(6061) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಬೈಂದೂರು ವಿಧಾನ ಸಭಾ ಕ್ಷೇತ್ರದ ಪಡುವರಿ ತಡೆಗೋಡೆ ಪ್ರಸ್ತಾವನೆ ಈಗ ಯಾವ ಹಂತದಲ್ಲಿರುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಕೇಂದ್ರ ಪುರಸ್ಕೃತ ಯೋಜನೆಯಡಿ ಕುಂದಾಪುರ ತಾಲೂಕಿನ ಪಡುವರಿಯಲ್ಲಿ ಕರ್ನಾಟಕ ಇಂಜಿನಿರಿಂಗ್ ರಿಸರ್ಚ್ ಸ್ಟೇಷನ್ ಇವರ ವಿನ್ಯಾಸದ ಪ್ರಕಾರ 1170.00 ಮೀಟರ್ ಉದ್ದದ ಶಾಶ್ವತ ತಡೆಗೋಡೆ ನಿರ್ಮಿಸುವ ರೂ. 321 ಲಕ್ಷಗಳ ಅಂದಾಜಿಗೆ ಕೇಂದ್ರ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಕ್ರಮವಾಗಿ ಶೇ. 75 ಮತ್ತು 25 ಆಗಿರುತ್ತದೆ. ಆದರೆ ಈಗಿನ ತಾಂತ್ರಿಕ ಪರಿಣತರ ಸಮಿತಿಯ ಸಭೆಯ ಸೂಚನೆಯ ಪ್ರಕಾರ ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಪುಣೆ ಇವರ ಪರಿಷ್ಕೃತ ವಿನ್ಯಾಸದ ಪ್ರಕಾರ ರೂ. 321 ಲಕ್ಷಗಳ ಅಂದಾಜನ್ನು ತಯಾರಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಇದರಲ್ಲಿ 654.00 ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲು ಸಾಧ್ಯವಾಗುತ್ತದೆ. 1170.00ಮೀ. ಗಳಲ್ಲಿ ಬಾಕಿ ಉಳಿದ 516.00 ಮೀ. ಉದ್ದಕ್ಕೆ ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್, ಪುಣೆ ಇವರ ವಿನ್ಯಾಸದ ಪ್ರಕಾರವೇ ರೂ. 254 ಲಕ್ಷಗಳ ಹೆಚ್ಚುವರಿ ಅಂದಾಜು ಪಟ್ಟಿಯನ್ನು ತಯಾರಿಸಿ ರಾಜ್ಯ ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಸದ್ರಿ ಪ್ರದೇಶದಲ್ಲಿ ಒಟ್ಟು 1,170.00 ಮೀಟಂಗೆ ತಡೆಗೋಡೆ ನಿರ್ಮಿಸಬೇಕಾಗಿದ್ದು ಇದಕ್ಕೆ ಮೇಲ್ಕಾಣಿಸಿದ ಪುಣೆಯ ಸಂಸ್ಥೆಯ ನೀಡಿದ ವಿನ್ಯಾಸದಂತೆ ಒಟ್ಟು ರೂ.575 ಲಕ್ಷಗಳ ಅಂದಾಜು ಬೇಕಾಗುತ್ತದೆ. ನಂತರದಲ್ಲಿ ಎರಡು ಅಂದಾಜನ್ನು ಒಟ್ಟಿಗೆ ಸೇರಿಸಿ 1170.00 ಮೀಟಗೆ ರೂ.575 ಲಕ್ಷಗಳ ಅಂದಾಜು ತಯಾರಿಸಿ ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ದಿನಾಂಕ: 20.07.2005 ರಂದು ನಡೆದ 25 ನೇ ತಾಂತ್ರಿಕ ಪರಿಣಿತರ ಸಮಿತಿಯ ಸಭೆಯಲ್ಲಿ ರೂ. 321 ಲಕ್ಷಗಳ ಮೊತ್ತದ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿರುತ್ತಾರೆ. ಪರಿಷ್ಕೃತ ಅಂದಾಜು ಪಟ್ಟಿಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ತಕ್ಷಣ ಕಾಮಗಾರಿ ಕೈಗೊಳ್ಳಲಾಗುವುದು.

5367(6041) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?